**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ. ಸಿ8(6)ಶಾಶಿಅ ವೇ ಅನು 1/2013-14 ದಿನಾಂಕ: 30.05.2013

ಬೆಂಗಳೂರು ಮತ್ತು ಮೈಸೂರು ವಿಭಾಗದ
ಸಾರ್ವಜನಿಕ ಶಿಕ್ಷಣ ಇಲಾಖೆಯ
ಎಲ್ಲಾ ಉಪನಿರ್ದೇಶಕರುಗಳು[ಆಡಳಿತ]

ಮಾನ್ಯರೆ,

ವಿಷಯ: ದಿ:01.06.1987 ರಿಂದ 1994-95ನೇ ಸಾಲಿನಲ್ಲಿ ಅನುದಾನರಹಿತವಾಗಿ ಪ್ರಾರಂಭಿಸಿರುವ ಶಾಲೆಗಳನ್ನು ಅನುದಾನಕ್ಕೊಳಪಡಿಸುವ ಬಗ್ಗೆ ಮತ್ತು ಬಾಕಿ ಇರುವ ಪ್ರಸ್ತಾವನೆಗಳ ಮಾಹಿತಿ ಪಡೆಯುವ ಬಗ್ಗೆ.

ಉಲ್ಲೇಖ: 1.ಸರ್ಕಾರದ ಆದೇಶ ಸಂಖ್ಯೆ: ಇಡಿ 59 ಪಿಎಂಸಿ 2006 ದಿ: 06.10.2007
2.ಸರ್ಕಾರದ ಆದೇಶ ಸಂಖ್ಯೆ: ಇಡಿ 217 ಪಿಎಂಸಿ 2008 ದಿ: 08.09.2008.
3. ದಿ: 25.05.2013ರಂದು ನಡೆದ ಭರವಸೆ ಸಮಿತಿ ಸಭೆಯಲ್ಲಿ ಚರ್ಚಿಸಿದಂತೆ.

************

ವಿಷಯಕ್ಕೆ ಸಂಬಂಧಿಸಿದಂತೆ, ದಿ: 01.06.1987 ರಿಂದ 1994-95ನೇ ಸಾಲಿನಲ್ಲಿ ಅನುದಾನರಹಿತವಾಗಿ ಪ್ರಾರಂಭಿಸಿರುವ ಶಾಲೆಗಳನ್ನು ಅನುದಾನಕ್ಕೊಳಪಡಿಸುವ ಬಗ್ಗೆ ಉಲ್ಲೇಖದ ಸರ್ಕಾರದ ಆದೇಶಗಳಲ್ಲಿ ಸರ್ಕಾರವು ಅವಕಾಶ ಕಲ್ಪಿಸಿದೆ. ಅದರಂತೆ ಸತತವಾಗಿ ನಡೆಯುತ್ತಿರುವ ಬೆಂಗಳೂರು ಮತ್ತು ಮೈಸೂರು ವಿಭಾಗದಲ್ಲಿ ಪ್ರಾರಂಭವಾಗಿರುವ 848 ಪ್ರೌಢಶಾಲೆಗಳಲ್ಲಿ ಸುಮಾರು 530 ಪ್ರೌಢಶಾಲೆಗಳನ್ನು ಸಹಾಯಾನುದಾನಕ್ಕೊಳಪಡಿಸಿ ಸರ್ಕಾರವು ಆದೇಶ ಹೊರಡಿಸಿದೆ. ಉಳಿದಂತೆ ಮೇಲಿನ ಅವಧಿಯಲ್ಲಿ ಪ್ರಾರಂಬಿಸಿರುವ 318 ಅನುದಾನ ರಹಿತ ಪ್ರೌಢಶಾಲೆಗಳನ್ನು ವೇತನಾನುದಾನಕ್ಕೊಳಪಡಿಸುವ ಬಗ್ಗೆ ಈ ಕಛೇರಿಯಲ್ಲಾಗಲೀ ಅಥವಾ ಸರ್ಕಾರದಲ್ಲಿಯಾಗಲೀ ಅಂತಹ ಪ್ರೌಢಶಾಲೆಗಳ ಮಾಹಿತಿ ಇರುವುದಿಲ್ಲ. ಮತ್ತು ಬಾಕಿ ಇರುವ ಪ್ರಸ್ತಾವನೆಗಳು ಯಾವ ಕಾರಣಕ್ಕಾಗಿ ಸಲ್ಲಿಕೆಯಾಗಿಲ್ಲ ಎಂಬ ಬಗ್ಗೆ ದಿ:21.05.2013 ರಂದು ನಡೆದ **ವಿಧಾನ ಪರಿಷತ್ ಭರವಸೆ ಸಮಿತಿಯಲ್ಲಿ ಚರ್ಚೆಗೆ ಗ್ರಾಸವಾಗಿ ನಂತರ ಸಭೆಯಲ್ಲಿ ನೀಡಿದ ಸೂಚನೆಯಂತೆ ನಿಮ್ಮ ಹಂತದಲ್ಲಿ ಬಾಕಿ ಇರುವ ಪ್ರಸ್ತಾವನೆಗಳು/ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿ ಬಾಕಿ ಇರುವ ಪ್ರಸ್ತಾವನೆಗಳ ಮಾಹಿತಿಯನ್ನು ಮತ್ತು ಆಡಳಿತ ಮಂಡಳಿಗಳು ಯಾವ ಕಾರಣಕ್ಕಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುವುದಿಲ್ಲ** ಎಂಬ ಬಗ್ಗೆ ಮೇಲಿನ ಉಲ್ಲೇಖದ ಸರ್ಕಾರದ ಆದೇಶಗಳಲ್ಲಿನ ಷರತ್ತುಗಳನ್ನು ಪಾಲಿಸಿರುವ ಬಗ್ಗೆ ಖಚಿತಪಡಿಸಿಕೊಂಡು ಪ್ರಸ್ತಾವನೆಗಳನ್ನು ಸಲ್ಲಿಸಲು ತಿಳಿಸಿ ಬಾಕಿ ಇರುವ ಪ್ರಕರಣಗಳ ಬಗ್ಗೆ ಈ ಪತ್ರಕ್ಕೆ ಲಗತ್ತಿಸಿರುವ ನಿಗದಿತ ನಮೂನೆಗಳಲ್ಲಿ **ದಿ:10.06.2013ರೊಳಗೆ** ವಿಳಂಬಕ್ಕೆ ಅವಕಾಶ ನೀಡದೇ ಮಾಹಿತಿಯನ್ನು ದೃಢೀಕರಿಸಿ ಸಲ್ಲಿಸಲು ತಿಳಿಸಿದೆ. ಈ ಮಾಹಿತಿಯನ್ನು ಎಂ.ಎಸ್.ಎಕ್ಸೆಲ್ ನಲ್ಲಿ ನುಡಿ ಅಕ್ಷರ ಫಾಂಟ್‌ನಲ್ಲಿ ಮಾತ್ರ ಗಣಕೀಕರಿಸಿ ನಿರ್ದೇಶಕರು(ಪ್ರೌಢಶಿಕ್ಷಣ) ಇವರ ಇ-ಮೇಲ್ ವಿಳಾಸ secdirector.edu.sgkar@nic.in ಕ್ಕೆ ಕಳುಹಿಸಿಲು ಹಾಗೂ ಒಂದು ಪ್ರತಿ ಹಾರ್ಡ್ ಕಾಪಿಯನ್ನು ಮುದ್ದಾಂ ಸಲ್ಲಿಸಲು ಸಹ ತಿಳಿಸಿದೆ.

ದಿ: 01.06.1987 ರಿಂದ 1994-95ನೇ ಸಾಲಿನಲ್ಲಿ ಅನುದಾನರಹಿತವಾಗಿ ಪ್ರಾರಂಭಿಸಿರುವ ಶಾಲೆಗಳನ್ನು ವೇತನಾನುದಾನಕ್ಕೊಳಪಡಿಸಲು ಇದುವರೆವಿಗೂ ಪ್ರಸ್ತಾವನೆಗಳನ್ನು ಆಡಳಿತ ಮಂಡಳಿ/ಸಂಸ್ಥೆಯವರು ಸಲ್ಲಿಸದಿದ್ದಲ್ಲಿ ಯಾವ ಕಾರಣಕ್ಕಾಗಿ ಸಲ್ಲಿಸಿಲ್ಲ ಆ ಸಂಸ್ಥೆಗಳಿಗೆ ಅನುದಾನಕ್ಕೊಳಪಡಿಸಲು ಇಚ್ಛೆ ಇದೆಯೇ? ಇಲ್ಲವೇ? ಎಂಬುದರ ಬಗ್ಗೆ ಖಚಿತಪಡಿಸಿಕೊಂಡು ಅವರಿಂದ ಈ ಬಗ್ಗೆ ಸ್ಪಷ್ಟ ಲಿಖಿತ ಹೇಳಿಕೆ ಪಡೆದು ಈ ಕಛೇರಿ ವರದಿ ಮಾಡುವುದು.

ತಮ್ಮ ನಂಬುಗೆಯ

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿ:-
1. ಗೌರವಪೂರ್ವಕವಾಗಿ ಅಧ್ಯಕ್ಷರು, ವಿಧಾನ ಪರಿಷತ್ ಭರವಸೆ ಸಮಿತಿ, 3ನೇ ಮಹಡಿ, ಶಾಸಕರ ಭವನ, ಬೆಂಗಳೂರು-1
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ
3. ಕಛೇರಿ ಪ್ರತಿ.

\\Typing3server\typing3server\D\EST2\8528.doc

## ನಮೂನೆ-1

### ದಿನಾಂಕ: 01.06.1987 ರಿಂದ 1994-95ನೇ ಸಾಲಿನವರೆಗೆ ಪ್ರಾರಂಭವಾದ ಖಾಸಗಿ ಪ್ರೌಢಶಾಲೆಗಳನ್ನು ಅನುದಾನಕ್ಕೆ ಒಳಪಡಿಸಿರುವ ಶಾಲೆಗಳ ವಿವರ

**ಜಿಲ್ಲೆಯ ಹೆಸರು:-**

| ಕ್ರ ಸಂ | ಶಾಲೆ ಪ್ರಾರಂಭಿಸಿದ ವರ್ಷ | ಅನುದಾನಕ್ಕೆ ಒಳಪಡಿಸಿದ ಶಾಲೆಗಳ ಹೆಸರು ಮತ್ತು ವಿಳಾಸ | ಆಡಳಿತ ಮಂಡಳಿಯ ಸ್ವರೂಪ | | | | ಅನುದಾನಕ್ಕೊಳಪಡಿಸಿದ ಸಿಬ್ಬಂದಿಗಳ ಸಂಖ್ಯೆ ಮತ್ತು ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ | | |
|---|---|---|---|---|---|---|---|---|---|
| | | | ಎಸ್‌ಸಿ | ಎಸ್‌ಟಿ | ಸಾಮಾನ್ಯ | ಅಲ್ಪಸಂಖ್ಯಾತ | ಬೋಧಕ | ಬೋಧಕೇತರ | ಆದೇಶ ದಿನಾಂಕ |
| | | | | | | | | | |

## ನಮೂನೆ-2

### ದಿನಾಂಕ: 01.06.1987 ರಿಂದ 1994-95ನೇ ಸಾಲಿನವರೆಗೆ ಪ್ರಾರಂಭವಾದ ಖಾಸಗಿ ಪ್ರೌಢಶಾಲೆಗಳನ್ನು ಅನುದಾನಕ್ಕೆ ಒಳಪಡಿಸದೇ ಇರುವ ಶಾಲೆಗಳ ವಿವರ

| ಕ್ರ.ಸಂ | ಶಾಲೆ ಪ್ರಾರಂಭಿಸಿದ ವರ್ಷ | ಇನ್ನೂ ಅನುದಾನಕ್ಕೆ ಒಳಪಡಿಸದೇ ಇರುವ ಶಾಲೆಗಳ ಹೆಸರು ಮತ್ತು ವಿಳಾಸ | ಅನುದಾನಕ್ಕೆ ಒಳಪಡಿಸದೇ ಇರುವ ಬಗ್ಗೆ ಸಕಾರಣ | ಷರಾ |
|---|---|---|---|---|
| | | | 1.<br>2.<br>3. | |